# ಆಹಾ ಸುದ್ದಿ!

★ ಸಸಿತೋಟ



ರಷ್ಯಾದ ಈ ಕೇಶ ವಿನ್ಯಾಸಕ ಡೇನಿಲ್‌ಗೆ ಕತ್ತರಿ ಬದಲು ಕೊಡಲಿ ಹಿಡಿದು ಕೂದಲು ಕತ್ತರಿಸುವುದು ಸುಲಭವಂತೆ. ಸದ್ಯ, ಡೇನಿಲ್ ಕೇಶ ವಿನ್ಯಾಸದ ಕಸುಬು ಕಲಿತ, ದಂತ ಚಿಕಿತ್ಸೆಯಲ್ಲೇನಾದರೂ ತರಬೇತಿ ಪಡೆದಿದ್ದರೆ ಗ್ರಾಹಕರೂ ಕೈಗೆ ಕೊಡಲಿ ತೆಗೆದುಕೊಳ್ಳುತ್ತಿದ್ದರು!



ಚೀನಾದಲ್ಲಿ ಮೇಕೆಗಳನ್ನು ಮಿನಿ ಬಸ್‌ನಲ್ಲಿ ತಂದು ತಾಜಾ ಹಾಲು ಪೂರೈಸುವ ಉದ್ಯಮ ಜೋರಂತೆ. ನಮ್ಮಲ್ಲಿ ಈಗಲೂ ಕೆಲವು ಕಡೆ ಮನೆ ಬಾಗಿಲಿಗೇ ಹಸುವನ್ನು ಕರೆತಂದು ಹಾಲು ಕರೆದು ಕೊಡುವ ಸಂಪ್ರದಾಯವಿದ್ದು ಇದಕ್ಕೇ ಕೊಂಚ ಹೈಟೆಕ್ ಟಚ್ ಕೊಡಲಾಗಿದೆ.



ನ್ಯೂಝಿಲೆಂಡ್‌ನಲ್ಲಿ ಇತ್ತೀಚೆಗೆ ನಡೆದ ವರ್ಲ್ಡ್ ಮಾಸ್ಟರ್ಸ್ ಗೇಮ್ಸ್‌ನಲ್ಲಿ ಒಂದು ನೂರು ಮೀಟರ್ ಓಟದಲ್ಲಿ ಭಾರತದ 101 ವರ್ಷ ವಯಸ್ಸಿನ ಮಾನ್ ಕೌರ್ ಎಂಬಾಕೆಗೆ ಚಿನ್ನದ ಪದಕ ಸಿಕ್ಕಿದೆಯಂತೆ. ಈ ದೂರವನ್ನು ಒಂದು ನಿಮಿಷ 14.58 ಸೆಕೆಂಡ್‌ನಲ್ಲಿ ಕ್ರಮಿಸಿ ಪ್ರಶಸ್ತಿ ಗೆದ್ದಳಂತೆ ಈ ವಯೋವೃದ್ಧೆ. ಗೆಲುವು ಓಟ ಆರಂಭಿಸುವ ಮುನ್ನವೇ ನಿಶ್ಚಿತವಾಗಿತ್ತು, ಸ್ಪರ್ಧೆಯಲ್ಲಿದ್ದದ್ದು ಆಕೆಯೊಬ್ಬಳೇ.

ಅಮೆರಿಕಾದಲ್ಲಿ ಇತ್ತೀಚೆಗೆ ಚುಂಬಿಸುವ ಸ್ಪರ್ಧೆ ನಡೆಯಿತು, ಕಾರನ್ನು ಸತತ 50 ಗಂಟೆಗಳ ಕಾಲ ಮುತ್ತಿಕ್ಕಿದರೆ ಆ ಕಾರು ಅವರಿಗೆ ಉಡುಗೊರೆ. ಗಿಲಿನಿ ಜಯಸೂರ್ಯ ಎಂಬ ಯುವತಿ 50 ಸ್ಪರ್ಧಿಗಳನ್ನು ಹಿಂದಿಕ್ಕಿ ಗೆಲುವು ಸಾಧಿಸಿದಳಂತೆ. ಕೈಕೊಟ್ಟ ಗೆಳೆಯನ ಮೇಲಿನ ಸೇಡನ್ನು ಕಾರಿನ ಮೇಲೆ ತೀರಿಸಿಕೊಂಡಳು ಎಂದು ಸೋತವರು ಉರಿ ಕಾರಿರಬಹುದು.



ಇದು ನಾರ್ಡ್‌ಸ್ಟ್ರಾಮ್ ಕಂಪೆನಿ ಹೊರತಂದಿರುವ 'ಕೆಸರು' ಜೀನ್ಸ್ ಪ್ಯಾಂಟ್. ಜೀನ್ಸ್‌ಗೆ ಕೆಸರಿನ ಲೇಪನ ಮಾಡಿ ಮಾರುಕಟ್ಟೆಗೆ ಬಿಟ್ಟಿರುವ ಈ ಬಾರ್ರಾಖುದಾ ಹೆಸರಿನ ಜೀನ್ಸ್ ಬೆಲೆ 425 ಡಾಲರ್ ಅಂತೆ. ಸೆಗಣಿ ಲೇಪಿಸಿದ ಜೀನ್ಸ್ ಬಿಡುಗಡೆ ಮಾಡಿ ಎಂದು ವೆಬ್‌ಸೈಟ್‌ನಲ್ಲಿ ಉಚಿತ ಸಲಹೆಯೂ ಬಂದಿದೆಯಂತೆ. ಒಟ್ಟಿನಲ್ಲಿ ಖುದಾನೇ ಕಾಪಾಡಬೇಕು, ಜೀನ್ಸ್ ಧರಿಸಿದವರನ್ನಲ್ಲ, ನೋಡುವವರನ್ನ.

ಉತ್ತರಪ್ರದೇಶದಲ್ಲಿ ಮದುವೆ ಸಮಾರಂಭದಲ್ಲಿ ಮಾಂಸದ ಭಕ್ಷ್ಯ ಬಡಿಸಲಿಲ್ಲ ಎಂಬ ಕಾರಣ ಮುಂದೊಡ್ಡಿ ವರನೊಬ್ಬ ಹುಡುಗಿಯನ್ನು ಮದುವೆಯಾಗಲು ನಿರಾಕರಿಸಿದನಂತೆ. ಅಲ್ಲಿ ಅಕ್ರಮ ಕಸಾಯಿಖಾನೆಗಳನ್ನು ಮುಚ್ಚುವ ಮುಖ್ಯಮಂತ್ರಿಗಳ ಆದೇಶದಿಂದ ಮಾಂಸದ ದರ ಗಗನಕ್ಕೇರಿದ್ದು, ವಧುವಿನ ಕಡೆಯವರು ಸಸ್ಯಾಹಾರದ ಮೆನುವಿಗೆ ಮೊರೆ ಹೋಗಿದ್ದರಂತೆ. ಪರಿಸ್ಥಿತಿಯ ಲಾಭ ಪಡೆದ ಸಂಬಂಧಿಕರ ಯುವಕನೊಬ್ಬ ಮುಂದೆ ಬಂದು ಹುಡುಗಿಯನ್ನು ಮದುವೆಯಾದನಂತೆ. ನಿರ್ಧಾರ ಊಟದ ನಂತರ ಬಂದಿರಬಹುದು.